# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2725\2016\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:22/06/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಸೀತಾರಾಂ ಬಿನ್ ಗೋವಿಂದಪ್ಪ, ಗೇರುಪುರ, ಕಸಬಾ ಹೋಬಳಿ, ಹೊಸನಗರ ತಾಲ್ಲೂಕ್, ಶಿವಮೊಗ್ಗ ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕ್ ಕಸಬಾ ಹೋಬಳಿ ಗೇರುಪುರ ನಿವಾಸಿಯಾದ ಶ್ರೀ.ಸೀತಾರಾಂ ಬಿನ್ ಗೋವಿಂದಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕ್ 1) ಗುಡ್ಡೆಕೊಪ್ಪ ಗ್ರಾಮ ಲೆಕ್ಕಿಗರಾದ ಶ್ರೀ.ರೇಣುಕಯ್ಯ, 2) ರಾಜಸ್ವ ನಿರೀಕ್ಷಕರಾದ ಶ್ರೀ.ಎ.ವಿ.ವೆಂಕಟೇಶಮೂರ್ತಿ, 3) ತಾಲ್ಲೂಕ್ ಕಛೇರಿ ತಹಶೀಲ್ದಾರಾದ ಶ್ರೀ.ಚಂದ್ರಶೇಖರ ನಾಯ್ಕ ಮತ್ತು 4) ಬಗರ್ ಹುಕುಂ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ.ಈರಗಿ ಉಮೇಶ್ (ಇನ್ನು ಮುಂದೆ "1 ರಿಂದ 4ನೇ ಎದುರುದಾರ" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕ್ ಗೇರುಪುರ ಗ್ರಾಮದ ಸರ್ವೆ ನಂ.2ರಲ್ಲಿ ಸರ್ಕಾರಿ ಗೋಮಾಳವಿದ್ದು, ಸದರಿ ಜಾಗವು ಹಣದ ಆಮಿಷಕ್ಕೆ ಬಲಿಯಾಗಿ ಸದರಿ ಸ್ವತ್ತಿನಲ್ಲಿ ಹಕ್ಕು ಸ್ವಾಧೀನವಿಲ್ಲದಿದ್ದರೂ ಸಹ ಶ್ರೀ.ವೆಂಕಟದಾಸ ಬಿನ್ ತಿಮ್ಮದಾಸ ಮತ್ತು ಶ್ರೀಮತಿ. ಓಂಕಾರಮ್ಮ ಕೋಂ ತಿಮ್ಮದಾಸ ರವರಿಗೆ 1 ಎಕರೆ 30 ಗುಂಟೆ ಜಮೀನು ಮಂಜೂರಾಗಿದೆ. ಆದರೆ ಇವರ ತಾಯಿಯ ಹೆಸರಿನಲ್ಲಿ 4 ಎಕರೆ ಜಮೀನಿದ್ದು, ಸದರಿಯವರ ವಾರ್ಷಿಕ ಆದಾಯ ₹15,000/- ಎಂದು ಸುಳ್ಳು ವರದಿ ನೀಡಿದ್ದಾರೆ. ಆದರೆ, ಸದರಿಯವರ ಆದಾಯ ಅಂದಾಜು ₹2 ಲಕ್ಷಕ್ಕಿಂತ ಅಧಿಕವಾಗಿದೆ. ಅದೇ ರೀತಿ ಶ್ರೀ.ಜಿ.ಎನ್.ಗಣಪತಿ ಬಿನ್

Sd/-

ಲಿಂಗದಾಸ ಕೋಂ ಸಾವಿತ್ರಿ ಕೋಂ ಗಣಪತಿ ರವರಿಗೆ 1 ಎಕರೆ 5 ಗುಂಟೆ ಮಂಜೂರಾಗಿದೆ. ಇವರ ಹೆಸರಿನಲ್ಲಿ 4 ಎಕರೆ ಜಮೀನು 13 ಗುಂಟೆ ಅಡಿಕೆ ತೋಟವಿದ್ದು, ವಾರ್ಷಿಕ ಆದಾಯ ₹2 ಲಕ್ಷಕ್ಕಿಂತ ಅಧಿಕವಾಗಿದೆ. ಆದರೆ, ಇವರಿಗೆ ವಾರ್ಷಿಕ ಆದಾಯ ₹15,000/-ವೆಂದು ಎದುರುದಾರರು ಸುಳ್ಳು ವರದಿ ನೀಡಿದ್ದಾರೆ. ಶ್ರೀ.ಧರ್ಮಪ್ಪ ಬಿನ್ ನಾಗಪ್ಪದಾಸ್ ಮತ್ತು ಶ್ರೀಮತಿ.ಸುಮಿತ್ರಾ ಕೋಂ ಧರ್ಮಪ್ಪ ರವರು ಒಂದೇ ಮನೆಯಲ್ಲಿ ವಾಸವಾಗಿದ್ದು, ಇವರ ತಂದೆಯ ಹೆಸರಿಗೆ 3.17 ಗುಂಟೆ ಜಮೀನಿದ್ದು, ಎದುರುದಾರರು ಹಣ ಪಡೆದು ಇವರ ಕುಟುಂಬಕ್ಕೆ 35 ಗುಂಟೆ ಸರ್ಕಾರಿ ಜಾಗವನ್ನು ಮಂಜೂರು ಮಾಡಿದ್ದಾರೆ. ಇವರ ವಾರ್ಷಿಕ ಆದಾಯ ₹2 ಲಕ್ಷಕ್ಕಿಂತ ಅಧಿಕವಾಗಿದ್ದು, ₹15,000/- ಎಂದು ಸುಳ್ಳು ವರದಿ ನೀಡಿರುವುದಾಗಿ ದೂರುದಾರರು ಹೇಳಿದ್ದಾರೆ.

3. ದೂರಿಗೆ ಎದುರುದಾರರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಗೇರುಕುಪ್ಪೆ ಗ್ರಾಮದ ಸರ್ವೆ ನಂ.2ರ ಗೋಮಾಳ ಜಮೀನಿಗೆ ಸಂಬಂಧಪಟ್ಟಂತೆ ಶ್ರೀ.ವೆಂಕಟದಾಸ ಬಿನ್ ತಿಮ್ಮದಾಸ ರವರ ಹೆಸರಿನಲ್ಲಿ ಯಾವುದೇ ಕೃಷಿ ಜಮೀನು ಇಲ್ಲ. ಆದರೆ, ಅವರ ತಾಯಿ ದಿವಂಗತ ಶ್ರೀಮತಿ.ಕನ್ನಮ್ಮ ಕೋಂ ತಿಮ್ಮದಾಸ ರವರ ಹೆಸರಿಗೆ ಪಿತ್ರಾರ್ಜಿತವಾಗಿ ಬಂದಂತಹ ಸರ್ವೆ ನಂ.5/3ರಲ್ಲಿ 4.4 ಎಕರೆ ತರಿ ಜಮೀನಿದ್ದು, ಸದರಿಯವರ ತಾಯಿಗೆ ಮಂಜೂರಿದಾರರು ಸೇರಿ, ಒಟ್ಟು ಇಬ್ಬರು ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳಿದ್ದಾರೆ. ಗಂಡು ಮಕ್ಕಳು ಪ್ರತ್ಯೇಕವಾಗಿ ವಾಸವಿದ್ದಾರೆ. ಸದರಿ ಜಮೀನಿನಲ್ಲಿ ಹಿಸ್ಸೆ ಮಾಡಿಕೊಂಡು ಕೃಷಿ ಮಾಡುತ್ತಿರುವುದು ಕಂಡು ಬಂದಿದೆ. ಮಂಜೂರಾದ ಜಮೀನು ಸೇರಿ ಸದರಿಯವರ ಕುಟುಂಬಕ್ಕೆ 3 ಎಕರೆ 23 ಗುಂಟೆ ಜಮೀನು ಇದೆ. ಶ್ರೀ.ಧರ್ಮಪ್ಪ ಬಿನ್ ನಾಗಪ್ಪ ರವರ ಹೆಸರಿನಲ್ಲಿ ಯಾವುದೇ ಕೃಷಿ ಜಮೀನು ಇಲ್ಲ. ಅವರ ತಂದೆಯ ಹೆಸರಿನಲ್ಲಿ ಸರ್ವೆ ನಂ.4/8 ಮತ್ತು 5/2ರಲ್ಲಿ 3 ಎಕರೆ 38 ಗುಂಟೆ ಜಮೀನಿದ್ದು, ಅವರ ಮಕ್ಕಳುಗಳ ನಡುವೆ ಹಿಸ್ಸೆಯಾಗಿದೆ. ಶ್ರೀ.ಗಣಪತಿ ಬಿನ್ ಲಿಂಗದಾಸ ರವರಿಗೆ ಗೇರುಪುರ ಗ್ರಾಮದ ಸರ್ವೆ ನಂ.4/7ರಲ್ಲಿ 13 ಗುಂಟೆ ಖುಷ್ಕಿ ಜಮೀನಿದ್ದು, ಸರ್ವೆ ನಂ.2ರಲ್ಲಿ 2 ಎಕರೆ ಜಮೀನು 3 ಜನ ಸಹೋದರರ ಹೆಸರಿಗೆ ಜಂಟಿ ಖಾತೆಯಿದ್ದು, ಸರ್ವೆ ನಂ.2ರಲ್ಲಿ 1 ಎಕರೆ 5 ಗುಂಟೆ ಜಮೀನು ಮಂಜೂರಾಗಿದೆ. ಶ್ರೀಮತಿ.ಗ್ರೇಸಿ ಡಿಸೋಜಾ ಕೋಂ ವೆಲ್ಲಿ ಡಿಸೋಜಾ ರವರಿಗೆ ಯಾವುದೇ ಜಮೀನು ಇಲ್ಲ. ಸದರಿಯವರಿಗೆ 1 ಎಕರೆ 10 ಗುಂಟೆ ಜಮೀನು ಮಂಜೂರಾಗಿದೆಯೆಂದು ಹೇಳಿದ್ದಾರೆ.

4. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಜಮೀನಿನಲ್ಲಿ ಶ್ರೀ.ವೆಂಕಟದಾಸ ಬಿನ್ ತಿಮ್ಮದಾಸ ಮತ್ತು ಶ್ರೀಮತಿ.ಓಂಕಾರಮ್ಮ ಕೋಂ ವೆಂಕಟದಾಸ ರವರಿಗೆ ತಾಲ್ಲೂಕ್ ಅನಧಿಕೃತ ಸಾಗುವಳಿ ಸಕ್ರಮೀಕರಣ ಸಮಿತಿ ನಿರ್ಣಯದಂತೆ 1 ಎಕರೆ 30 ಗುಂಟೆ ಜಮೀನು ಮಂಜೂರಾಗಿದ್ದು, ಶ್ರೀ.ವೆಂಕಟದಾಸ ಬಿನ್ ತಿಮ್ಮದಾಸ ರವರ ಕುಟುಂಬದಲ್ಲಿ ಗೇರುಪುರ ಗ್ರಾಮದ ಸರ್ವೆ ನಂ.5/3ರಲ್ಲಿ 4 ಎಕರೆ 4 ಗುಂಟೆ ಜಮೀನು ಹೊಂದಿರುವುದು ಕಂಡು ಬಂದಿದೆ. ಅದರಲ್ಲಿ ಹಿಸ್ಸೆ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿದ್ದಾರೆ. ಪ್ರಸ್ತುತ ಬಗರ್ ಹುಕುಂ ಕಾಯಿದೆ ಅಡಿ ಒಟ್ಟು ಕುಟುಂಬಕ್ಕೆ 4 ಎಕರೆ 38 ಗುಂಟೆ ಜಮೀನನ್ನು ಹೊಂದಲು ಮಾತ್ರ ಅವಕಾಶವಿದ್ದು, ಮಂಜೂರಿದಾರರಿಗೆ ಈಗಾಗಲೇ ಹೊಂದಿರುವ ಒಟ್ಟು ಕುಟುಂಬದ ಜಮೀನು ಸೇರಿ 34 ಗುಂಟೆ ಜಮೀನನ್ನು ಹೊಂದಲು ಅವಕಾಶ ಹೊಂದಿರುವುದರಿಂದ, ಸದರಿ ಮಂಜೂರಾತಿಯನ್ನು ರದ್ದುಪಡಿಸಲು ಉಪವಿಭಾಗಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅದೇ ರೀತಿ, ಶ್ರೀ.ಗಣಪತಿ ಬಿನ್ ಲಿಂಗದಾಸ ಮತ್ತು ಶ್ರೀಮತಿ.ಸಾವಿತ್ರಿ ಕೋಂ ಗಣಪತಿ, ಶ್ರೀ.ಧರ್ಮಪ್ಪ ಬಿನ್ ನಾಗಪ್ಪ ಮತ್ತು ಶ್ರೀಮತಿ.ಸುಮಿತ್ರ ಕೋಂ ಧರ್ಮಪ್ಪ ರವರಿಗೆ ಮಂಜೂರು ಆದೇಶ ನೀಡಿ, ಸಾಗುವಳಿ ಚೀಟಿ ನೀಡಿರುವುದು ಕಾನೂನು ರೀತ್ಯಾ ಇದೆ. ಸದರಿ ಜಮೀನಿನ ಮಂಜೂರಾತಿಗೆ ಸಂಬಂಧಪಟ್ಟಂತೆ, ಶ್ರೀ.ಸುರೇಶ ಹಾಗೂ ಗ್ರಾಮಸ್ಥರು ಬಗರ್ ಹುಕುಂ ಸಾಗುವಳಿ ಸಮಿತಿ ಕೈಗೊಂಡ ನಿರ್ಣಯವನ್ನು ಪ್ರಶ್ನಿಸಿ, ಮಾನ್ಯ ಉಪವಿಭಾಗಾಧಿಕಾರಿಗಳು, ಸಾಗರ ರವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆಂದು ಹೇಳಿದ್ದಾರೆ.

5. ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಸದರಿ ಜಮೀನಿನಲ್ಲಿ ಶ್ರೀ.ವೆಂಕಟದಾಸ ಬಿನ್ ತಿಮ್ಮದಾಸ ರವರ ಕುಟುಂಬಕ್ಕೆ ಸಾಕಷ್ಟು ಜಮೀನಿದ್ದು, ಸದರಿಯವರಿಗೆ ಜಮೀನು ಮಂಜೂರು ಮಾಡಿರುವುದು ಕಾನೂನುಬಾಹಿರವಾಗಿದೆ. ಸದರಿ ಮಂಜೂರಾತಿಯನ್ನು ರದ್ದುಪಡಿಸುವ ಬಗ್ಗೆ ಉಪವಿಭಾಗಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಉಳಿದ ಮಂಜೂರಾತಿಯ ಬಗ್ಗೆ ಯಾವುದೇ ಕಾನೂನು ಉಲ್ಲಂಘನೆಯಾಗಿಲ್ಲ. ತಾವು, ಸದರಿ ಸಮಿತಿಯ ಸದಸ್ಯರಾಗಿದ್ದು, ತಮ್ಮ ಅವಧಿ ಮುಕ್ತಾಯಗೊಂಡಿರುವುದಾಗಿ ಹೇಳಿದ್ದಾರೆ.

6. ಎದುರುದಾರರ ಆಕ್ಷೇಪಣೆಗಳಿಗೆ ಪ್ರತ್ಯುತ್ತರವನ್ನು ಸಲ್ಲಿಸುವಂತೆ ದೂರುದಾರರನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಶಿವಮೊಗ್ಗ ಜಿಲ್ಲೆ ಗೇರುಪುರ ಗ್ರಾಮದ ಸರ್ವೆ ನಂ.2ರಲ್ಲಿ ಕೆಲವು ವ್ಯಕ್ತಿಗಳಿಗೆ ದಿ:25/07/16ರಂದು ಅನಧಿಕೃತ ಸಾಗುವಳಿ ಸಕ್ರಮೀಕರಣ ಸಮಿತಿಯ ನಿರ್ಣಯದಂತೆ ಜಮೀನು ಮಂಜೂರು ಮಾಡಿರುವುದು ಕಂಡು ಬಂದಿದೆ. ಸದರಿ ಜಮೀನುಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಮಾರ್ಗಸೂಚಿ ಉಲ್ಲಂಘಿಸಿ, ಮಂಜೂರಾತಿ ಮಾಡಿರುವುದು ಕಂಡು ಬಂದಿದೆ. ಎದುರುದಾರರು ಸದರಿ ಜಮೀನುಗಳನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಫಲಾನುಭವಿಗಳ ಆದಾಯದ ಮಿತಿಯ ಬಗ್ಗೆ ಯಾವುದೇ ಗಮನ ಹರಿಸಿಲ್ಲ ಮತ್ತು ಸದರಿ ಫಲಾನುಭವಿಗಳು ಹೊಂದಿರುವ ಇತರೆ ಜಮೀನುಗಳ ಬಗ್ಗೆ ಸರಿಯಾದ ರೀತಿ ತನಿಖೆ ನಡೆಸಿಲ್ಲ. ಶ್ರೀ.ವೆಂಕಟದಾಸ ಬಿನ್ ತಿಮ್ಮದಾಸ ಮತ್ತು ಶ್ರೀಮತಿ.ಓಂಕಾರಮ್ಮ ಕೋಂ ವೆಂಕಟದಾಸ ರವರಿಗೆ ಸದರಿ ಜಮೀನಿನಲ್ಲಿ 1 ಎಕರೆ 30 ಗುಂಟೆ ಜಮೀನು ಮಂಜೂರಾಗಿದೆ. ಆದರೆ, ಅವರ ಕುಟುಂಬಕ್ಕೆ ಸರ್ವೆ ನಂ.5/3ರಲ್ಲಿ 4 ಎಕರೆ 4 ಗುಂಟೆ ಜಮೀನು ಅಸ್ತಿತ್ವದಲ್ಲಿದೆ. ಬಗರ್ ಹುಕುಂ ಕಾಯಿದೆ ಅನ್ವಯ 1 ಕುಟುಂಬಕ್ಕೆ 4 ಎಕರೆ 38 ಗುಂಟೆ ಜಮೀನನ್ನು ಹೊಂದುವ ಬಗ್ಗೆ ಮಾತ್ರ ಅವಕಾಶವಿದ್ದು, ಸದರಿ ಮಂಜೂರಿದಾರರಿಗೆ ಈಗಾಗಲೇ ಹೊಂದಿರುವ ಒಟ್ಟು ಕುಟುಂಬದ ಜಮೀನು ಸೇರಿ 34 ಎಕರೆ ಜಮೀನನ್ನು ಹೊಂದಲು ಅವಕಾಶವಿದೆ. ಅದೇ ರೀತಿ, ಇತರೆ ಫಲಾನುಭವಿಗಳಿಗೆ ಮಂಜೂರು ಮಾಡಲಾದ ಜಮೀನುಗಳ ಪೈಕಿ ಶ್ರೀ.ಜಿ.ಎಲ್.ಗಣಪತಿ ಬಿನ್ ಲಿಂಗದಾಸ ಮತ್ತು ಶ್ರೀಮತಿ.ಸಾವಿತ್ರಿ ಕೋಂ ಗಣಪತಿ ರವರ ಹೆಸರಿಗೆ 1 ಎಕರೆ 5 ಗುಂಟೆ ಜಮೀನನ್ನು ಮಂಜೂರು ಮಾಡಿದ್ದು, ಸದರಿಯವರು ಸರ್ವೆ ನಂ.4/7ರಲ್ಲಿ 13 ಗುಂಟೆ, ಸರ್ವೆ ನಂ.2ರಲ್ಲಿ 2 ಎಕರೆ 3 ಗುಂಟೆ ಜಮೀನನ್ನು ಹೊಂದಿದ್ದಾರೆ. ಅದೇ ರೀತಿ, ಶ್ರೀ.ಧರ್ಮಪ್ಪ ಬಿನ್ ನಾಗಪ್ಪ ಮತ್ತು ಶ್ರೀಮತಿ.ಸುಮಿತ್ರ ಕೋಂ ಧರ್ಮಪ್ಪ ರವರಿಗೆ ಸದರಿ ಸರ್ವೆ ನಂಬರಿನಲ್ಲಿ 35 ಗುಂಟೆ ಮಂಜೂರಾಗಿದ್ದು, ಸದರಿ ಕುಟುಂಬಕ್ಕೆ ಸರ್ವೆ ನಂ.4/8 ಹಾಗೂ 5/2ರಲ್ಲಿ ವ್ಯವಸಾಯದ ಜಮೀನಿದೆ. ಯಾವುದೇ ವ್ಯಕ್ತಿ ಬಗರ್ ಹುಕುಂ ಸಾಗುವಳಿಯಂತೆ ಜಮೀನಿನ ಮಂಜೂರಾತಿ ಪಡೆಯಲು ತಮ್ಮ ಕುಟುಂಬದವರ ಹೆಸರಿನಲ್ಲಿ ಯಾವುದೇ ಜಮೀನುಗಳು ಇರತಕ್ಕದಲ್ಲ ಎಂಬುದಾಗಿ ತಿಳಿಸಿದ್ದು, ಆದರೆ ಸದರಿ ಕುಟುಂಬದವರು ಇತರೆ ಜಮೀನನ್ನು ಹೊಂದಿದ್ದರೂ ಸಹ ಎದುರುದಾರರು ಜಮೀನನ್ನು ಮಂಜೂರು ಮಾಡಿರುವುದು ಕಂಡು ಬಂದಿದೆ. ಸದರಿ ಮಂಜೂರಾತಿಯ ಕ್ರಮಬದ್ಧತೆಯನ್ನು ಪ್ರಶ್ನಿಸಿ, ಸಾಗರ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಶ್ರೀ.ಸುರೇಶ ಎಂಬುವವರು ಮೇಲ್ಮನವಿ ಸಲ್ಲಿಸಿರುವುದಾಗಿ ತಿಳಿಸಿದ್ದಾರೆ. ಆದರೆ, ಈ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ಜಮೀನನ್ನು ಮಂಜೂರು ಮಾಡುವ ಸಂದರ್ಭದಲ್ಲಿ ಫಲಾನುಭವಿಗಳ ಅರ್ಹತೆಯ ಬಗ್ಗೆ ಸರಿಯಾದ ರೀತಿ ಪರಿಶೀಲನೆ ಮಾಡದೇ ಸರ್ಕಾರದ ಮಾರ್ಗಸೂಚಿಯನ್ನು ಉಲ್ಲಂಘಿಸಿ, ಮಂಜೂರಾತಿ ಮಾಡಿ 1 ರಿಂದ 3ನೇ ಎದುರುದಾರರು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

Sd/-

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 1 ರಿಂದ 3ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಆದ್ದರಿಂದ, ಸದರಿ ಫಲಾನುಭವಿಗಳಿಗೆ ಸರ್ಕಾರದ ಮಾರ್ಗಸೂಚಿಗೆ ವಿರುದ್ಧವಾಗಿ ಮಂಜೂರಾಗಿರುವ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲು ಕಾನೂನು ರೀತ್ಯಾ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 22/6/17

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.